ಕಿನಬಾಲು ರಾಷ್ಟ್ರೀಯ ಉದ್ಯಾನ, ಜೀವವೈವಿಧ್ಯಕ್ಕೆ ಪ್ರಸಿದ್ಧಿ ಪಡೆದ ತಾಣ. ಇಲ್ಲಿರುವ ಸಸ್ಯ ಹಾಗೂ ಪ್ರಾಣಿಗಳು ಬೇರೆಲ್ಲೂ ಸಿಗಲಾರವು. ಅಲ್ಲೆರಡು ದಿನ ಉಳಿದು ಸುತ್ತಾಡಿ, ಅಲ್ಲಿಂದ ನನ್ನ ಗುರಿ ನವಿಲುಕೋಳಿಯಿರುವ ಕಾಡು. ಪಕ್ಷಿ ವೀಕ್ಷಕರು ಮತ್ತು ಛಾಯಾಗ್ರಾಹಕರನ್ನು ಆಕರ್ಷಿಸುವ ಈ ಉದ್ಯಾನದಿಂದ ಸುಮಾರು 3–4 ಗಂಟೆ ರಸ್ತೆ ಪ್ರಯಾಣ ಮಾಡಿದರೆ, ಟೆಲುಪಿಡ್ (Telupid) ಎಂಬ ಊರು ಸಿಗುತ್ತದೆ. ಅಲ್ಲಿ ಒಂದು ರಾತ್ರಿ ತಂಗಿದ್ದು, ಮಾರನೇ ದಿನ ಮುಂಜಾನೆ ನವಿಲುಕೋಳಿಯಿರುವ ಕಾಡಿಗೆ ಹೊರಟೆ.


ಸುಮಾರು ಒಂದು ಗಂಟೆ ರಸ್ತೆ ಪ್ರಯಾಣದ ನಂತರ ಮುಂದೆ ದಟ್ಟ ಕಾಡು ಪ್ರದೇಶ. ಅಲ್ಲಲ್ಲಿ ಪಾಮ್ ತೋಟಗಳು, ಮುಂದಕ್ಕೆ ರಕ್ಷಿತಾರಣ್ಯಕ್ಕೆ ಕಾಲುನಡಿಗೆಯಲ್ಲಿ ಹೋಗಬೇಕು. ಅಷ್ಟೇನೂ ಕಡಿದಾದ ಬೆಟ್ಟವಲ್ಲದಿದ್ದರೂ ಹರಿಯುವ ನೀರಿನ ಹಳ್ಳ ಕೊಳ್ಳಗಳನ್ನು ದಾಟಿ ಗಿಡಗಂಟಿಗಳ ಮಧ್ಯೆ ಸುಮಾರು ಎರಡು ಗಂಟೆ ಕಾಲ ಕ್ಯಾಮೆರಾ ಉಪಕರಣಗಳನ್ನು ಹೊತ್ತುಕೊಂಡು ಹೋಗಲು ಶ್ರಮದ ಕೆಲಸವೇ. ನನ್ನ ಜೊತೆ ನಮಗೆ ತಿಂಡಿ, ಊಟ, ನೀರು ಇತ್ಯಾದಿಗಳನ್ನು ಹೊತ್ತುಕೊಂಡು ಬರುವ ಅಲ್ಲಿಯ ಸ್ಥಳೀಯ ಜನ ಇಬ್ಬರಿದ್ದರು. ಅಂತೂ ನಿಯೋಜಿತ ಜಾಗ ಬಂತು.


ಬೋರ್ನಿಯ ದ್ವೀಪದ ಕಾಡಿನ ನಡುವೆ ಪಯಣ

ಪಕ್ಷಿ ವೀಕ್ಷಣೆಗೆಂದು ಒಂದು ಸಣ್ಣ ಟೆಂಟ್‌ನಲ್ಲಿ ಕುಳಿತು ಒಂದು ಕಿಂಡಿಯಿಂದ ಮಾತ್ರ ಹೊರಗಿನ ಜಾಗವನ್ನು ವೀಕ್ಷಿಸಬಹುದು. ಅಲ್ಲಿನ ಕಾಡು ಎಷ್ಟು ದಟ್ಟವಾಗಿರುತ್ತದೆಂದರೆ ಹಗಲಿನಲ್ಲೂ ಸೂರ್ಯನ ಕಿರಣ ನೆಲ ತಲುಪುತ್ತಿರಲಿಲ್ಲ. ಟೆಂಟಿನ ಒಳಗೂ ಹೊರಗೂ ನಸುಗತ್ತಲೆ. ನಮ್ಮ ಗೈಡ್ ಹೇಳಿದ ಪ್ರಕಾರ, ಒಂದು ಚೂರೂ ಸದ್ದಿಲ್ಲದೆ ಕುಳಿತುಕೊಂಡು ಪಕ್ಷಿಯ ಚಲನ ವಲನ ವೀಕ್ಷಣೆ ಮಾಡಬೇಕು. ಒಂದು ಚೂರು ಕೆಮ್ಮಿದರೂ ಪಕ್ಷಿ ನಾಪತ್ತೆಯಾಗುತ್ತದೆ. ಮತ್ತೆ ಎಷ್ಟು ಗಂಟೆ ಕಾದರೂ ಬರುವುದಿಲ್ಲ. ಅಂತೂ ಟೆಂಟ್ ಕಿಂಡಿಯಿಂದ ತದೇಕಚಿತ್ತನಾಗಿ ಹೊರಗೆ ನೋಡುತ್ತಾ ಕುಳಿತೆ. ಸುಮಾರು ಮೂರು ಗಂಟೆ ಕಳೆದ ನಂತರ ನಮ್ಮ ಗೈಡ್ ಕೈ ಸನ್ನೆ ಮಾಡಿದ.

ಅಲರ್ಟ್ ಆದೆ. ಕಾಡಿನ ದೊಡ್ಡ ಮರಗಳ ಸಂದಿನಿಂದ ಮೂಲೆಯಲ್ಲಿ ಒಂದು ಪಕ್ಷಿ ಕಾಣಿಸಿತು. ಕತ್ತಲಿನಂಥ ನೆರಳಿನಲ್ಲಿ ಒಂದು ಕೋಳಿ ಗಾತ್ರದ ತುಸು ನೀಲಿ ಬಣ್ಣದ ರೆಕ್ಕೆಪುಕ್ಕಗಳು, ಮೈ ತುಂಬಾ ಕಣ್ಣಿನಂತೆ ಹೊಳೆವ ದುಂಡಗೆ ಇರುವ ದಪ್ಪ ಚುಕ್ಕೆಗಳನ್ನು (ಇದನ್ನು Ocelli ಎಂದು ಕರೆಯುತ್ತಾರೆ) ಹೊಂದಿರುತ್ತದೆ. ಈ ಪಕ್ಷಿಯ ಬಾಲದಲ್ಲಿ ಎರಡು ಸಾಲು Ocelli ಮತ್ತು ಸಣ್ಣ ಜುಟ್ಟು ಇದೆ. ನಸುಗತ್ತಲಿನ ನೆರಳಿನಲ್ಲಿ ಈ ವಿನ್ಯಾಸ ಹೊಳೆಯುತ್ತದೆ. ಇದು ಗಂಡು ಪಕ್ಷಿ ಎಂದು ತಿಳಿಯಿತು. ಸ್ವಲ್ಪ ಸಮಯದ ನಂತರ ಇದೇ ರೀತಿ ಇರುವ, ಅಷ್ಟೇನೂ ಬಣ್ಣವಿಲ್ಲದ ಹೆಣ್ಣು ಪಕ್ಷಿಯೂ ಬಂತು. ಹೆಣ್ಣು, ಗಂಡು ಪಕ್ಷಿಗಳೆರಡೂ ಸ್ವಲ್ಪ ಹೊತ್ತು ನೆಲದಲ್ಲಿ ಏನೇನೋ ಹುಡುಕಿ ತಿನ್ನುತ್ತಿದ್ದವು. ನಾನು ಪಕ್ಷಿಗಳನ್ನು ಕಣ್ತುಂಬಿಸಿಕೊಂಡು ಕ್ಯಾಮೆರಾದಲ್ಲಿ ಕ್ಲಿಕ್ಕಿಸಲು ಆರಂಭಿಸಿದ್ದೇ, ಶಬ್ದ ಕೇಳಿದ ತಕ್ಷಣ ಅವೆರಡು ಓಡಿ ಹೋಗಿ ನಾಪತ್ತೆಯಾದವು. ಮತ್ತೆರಡು ಗಂಟೆ ಕಾದರೂ ಬರಲೇ ಇಲ್ಲ. ಅಂತೂ ನನ್ನ ಕನಸಿನ ಪಕ್ಷಿ ದರ್ಶನ ಕೊಟ್ಟಿತು.

ನವಿಲುಕೋಳಿಯ ಬಗ್ಗೆ ತಿಳಿವಳಿಕೆ ಬಹಳ ಕಡಿಮೆ ಮತ್ತು ಇದರ ಅಧ್ಯಯನ ತುಂಬಾ ಕಷ್ಟ. ಅಂತೂ ಸಾಹಸಮಯ ಚಾರಣದ ಜೊತೆಗೆ ಪ್ರಪಂಚದ ಅಪರೂಪದ ಪಕ್ಷಿಯನ್ನು ನೋಡಿ ಜೀವನ ಸಾರ್ಥಕವಾದ ಕ್ಷಣ ಅದೆನ್ನಿಸಿತ್ತು. ಆದರೆ ಬೋರ್ನಿಯ ದ್ವೀಪದ ದಟ್ಟ ಕಾಡಿನಲ್ಲಿರುವ ಈ ಪಕ್ಷಿ ಅರಣ್ಯನಾಶದ ಪರಿಣಾಮದಿಂದ ಅವನತಿಯತ್ತ ಸಾಗುತ್ತಿದೆ ಎಂದು ತಿಳಿದು ಬೇಸರವಾಯಿತು. ಪ್ರಪಂಚದಾದ್ಯಂತ ಪಾಮ್ ಆಯಿಲ್ ಬೇಡಿಕೆ ಇರುವುದರಿಂದ ಈ ಸಮಶೀತೋಷ್ಣವಲಯದ ಕಾಡನ್ನು ಕಡಿಯಲಾಗುತ್ತಿರುವುದು ಇಂದಿನ ವಿದ್ಯಮಾನ. ■


ಕೋಪನ್‌ಹೆಗನ್ ವಿಶ್ವವಿದ್ಯಾಲಯದ ಹಳೆಯ ಗ್ರಂಥಾಲಯ

# ಕೋಪನ್‌ಹೆಗನ್ ಪುಸ್ತಕ ಪ್ರೇಮ

ಸ್ಥಳ ವಿಶೇಷ

ಉತ್ತರ ಯೂರೋಪಿನ ಒಂದು ಮನಮೋಹಕ ಶಹರವೆಂದರೆ ಅದು ಕೋಪನ್‌ಹೆಗನ್. ಡೆನ್ಮಾರ್ಕ್ ದೇಶದ ರಾಜಧಾನಿ. ಹಿಂದೆ ಹಲವು ಬಾರಿ ಬೆಂಕಿಯಿಂದ ಆಘಾತಗೊಂಡರೂ ಇಂದಿಗೂ ಬಗೆ ಬಗೆ ಬಣ್ಣದ ಕಟ್ಟಡಗಳಿಂದ ಕಂಗೊಳಿಸುವ ಶಹರ. ಕೋಪನ್‌ಹೆಗನ್ ವಿಶ್ವವಿದ್ಯಾಲಯ ವಿಶ್ವಖ್ಯಾತಿ ಪಡೆದು ಅದರ ಮೆರುಗನ್ನು ಹೆಚ್ಚಿಸಿದೆ ಮತ್ತು ಹೆಚ್ಚಿಸುತ್ತಲೇ ಇದೆ. ಇತ್ತೀಚೆಗೆ ಕೋಪನ್‌ಹೆಗನ್‌ಗೆ ಹೋದಾಗ ಕೆಲಸ ಮಾಡುವ ಪ್ರಮೇಯ ಬಂತು. ಕೆಲಸ ಮಾಡಬಹುದಾದ ಸ್ಥಳವನ್ನು ಹುಡುಕುತ್ತಿರುವಾಗ ಕೆಫೆಯೊಂದು ಕಂಡುಬಂತು. 'ಪಾಲುಡನ್ ಬೊಗ್ ಕೆಫೆ– Not just another coffee place' ಎಂಬ ಫಲಕ ಕುತೂಹಲ ಮೂಡಿಸಿತು.

ಡ್ಯಾನಿಷ್ ಭಾಷೆಯಲ್ಲಿ 'ಬೊಗ್' ಎಂದರೆ ಪುಸ್ತಕ ಎಂದರ್ಥ. ಒಳಗೆ ಹೋದಾಗ ಕನಸಿನಂತೆ ಭಾಸವಾಯಿತು. ಆ ಸ್ನೇಹಶೀಲ ಕೆಫೆಯ ಎಲ್ಲಾ ದಿಕ್ಕಿನಲ್ಲೂ ಪುಸ್ತಕಗಳೇ ಇದ್ದವು. ಪಾಲುಡನ್ ಕೆಫೆ 1895ರಿಂದಲೇ ಇದ್ದು, ಅದಕ್ಕೂ ಮುಂಚೆ ಬಳಿಯೇ ಇದ್ದ ಕೋಪನ್‌ಹೆಗನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪುಸ್ತಕ ಮಾರಾಟ ಮಾಡುವ ಅಂಗಡಿ ಅದಾಗಿತ್ತು. ನಂತರದಲ್ಲಿ ಅದನ್ನು ಕೆಫೆಯಾಗಿ ಪರಿವರ್ತಿಸಲಾಗಿತ್ತು. ವಿಶ್ವವಿದ್ಯಾಲಯದ ಹಳೆಯ ಗ್ರಂಥಾಲಯ ಕೂಡ ಸಮೀಪದಲ್ಲೇ ಇದೆ.

ಕೋಪನ್‌ಹೆಗನ್ ವಿಶ್ವವಿದ್ಯಾಲಯ 1479ರಲ್ಲಿ ಸ್ಥಾಪಿತವಾಯಿತು. ಅದರ ನಂತರದ ಮೂರು ವರ್ಷದಲ್ಲೇ (1482) ಗ್ರಂಥಾಲಯದ ಸ್ಥಾಪನೆಯೂ ಆಯಿತು. ಪ್ರಸ್ತುತ 6,00,000 ಪುಸ್ತಕಗಳನ್ನು ಒಳಗೊಂಡು ಈಗ ಕಾರ್ಯನಿರ್ವಹಿಸದೆ ಒಂದು ಐತಿಹಾಸಿಕ ಸ್ಥಳವಾಗಿದೆ. ಒಂದು ಬಾರಿ ಬೆಂಕಿ, ಒಂದು ಬಾರಿ ಬಾಂಬಿನ ದಾಳಿಗೆ ಒಳಗಾಗಿತ್ತು. ಪ್ರಸ್ತುತ ಕಟ್ಟಡ ಜೋಹಾನ್ ಹೆರ್ಹೋಲ್ಟ್ ವಿನ್ಯಾಸಗೊಳಿಸಿದ್ದು, 1861ನೆಯ ಇಸವಿಯಿಂದ ನೆಲೆನಿಂತಿದೆ. 22 ತರಹದ ಇಟ್ಟಿಗೆಗಳನ್ನು ಬಳಸಿದ್ದು, ಕಬ್ಬಿಣದಿಂದ ಕಂಬಗಳನ್ನು ಮಾಡಲಾಗಿದೆ. 'Black Diamond' ಎಂಬ ಮತ್ತೊಂದು ಗ್ರಂಥಾಲಯವೂ ಸಮೀಪವಿದ್ದು, ಆಧುನಿಕ ಕಲಿಕೆಗೆ ಪೂರಕವಾಗಿದೆ.

■ ಚೇತನ್ ಈರಗಾರ